## 2023-24 ನೇ ಸಾಲಿನ ಮುಖ್ಯ ಕಾರ್ಯಕ್ರಮಗಳು ಮತ್ತು ಯೋಜನೆಗಳು

### 1. ನಿರಂತರ ಸ್ವಚ್ಛತಾ ಚಟುವಟಿಕೆಗಳು

69 ವಿಶ್ವವಿದ್ಯಾಲಯಗಳು ಮತ್ತು 4 ನಿರ್ದೇಶನಾಲಯಗಳು ಸ್ವಯಂಸೇವಕರಿಗೆ ಸ್ವಚ್ಛತಾ ಪ್ರತಿಜ್ಞೆಯನ್ನು ನೀಡಿರುತ್ತಾರೆ. ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಗಳ ಸ್ವಯಂಸೇವಕರು ಜಾಥಾಗಳನ್ನು ಆಯೋಜಿಸಿ ಜನರಲ್ಲಿ ಸ್ವಚ್ಛತೆಯ ಸಂದೇಶವನ್ನು ಹರಡಿರುತ್ತಾರೆ. ತಮ್ಮ ವಿಶ್ವವಿದ್ಯಾಲಯ ಮತ್ತು ಕಾಲೇಜು ಕ್ಯಾಂಪಸ್ಸನ್ನು ಸ್ವಚ್ಛವಾಗಿಡುವಲ್ಲಿ ಸ್ವಯಂ ಸೇವಕ/ಸೇವಕಿಯರು ಶ್ರಮಿಸಿದ್ದಾರೆ. ವಿಶೇಷ ಶಿಬಿರದಲ್ಲಿ ಈ ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ನೀಡಲಾಗಿದೆ.

### 2. ಗಣರಾಜ್ಯೋತ್ಸವ ಪಥಸಂಚಲನ ಶಿಬಿರ

2023-24ನೇ ಸಾಲಿನ ಗಣರಾಜ್ಯೋತ್ಸವ ಪೂರ್ವಭಾವಿ ಪಥಸಂಚಲನದ ರಾಜ್ಯ ಮಟ್ಟದ ಆಯ್ಕೆ ಶಿಬಿರವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಸ್ವಯಂ ಸೇವಕರಿಗೆ ದಿನಾಂಕ:10.10.2023 ಮತ್ತು ದಿನಾಂಕ:11.10.2023 ರಂದು ಹಾಗೂ ಸ್ವಯಂ ಸೇವಕಿಯರಿಗೆ ದಿನಾಂಕ:11.10.2023 ಮತ್ತು 12.10.2023ರಂದು ಆಯೋಜಿಸಲಾಗಿದೆ.

2024ನೇ ಸಾಲಿನ ಗಣರಾಜ್ಯೋತ್ಸವ ಪಥಸಂಚಲನ ಶಿಬಿರವು ದಿನಾಂಕ 14.01.2024ರಿಂದ ದಿನಾಂಕ 26.01.2024ರವರೆಗೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.

12 ಸ್ವಯಂಸೇವಕ/ಸೇವಕಿಯರು ಮತ್ತು ಒಬ್ಬರು ಕಾರ್ಯಕ್ರಮ ಅಧಿಕಾರಿ ನವದೆಹಲಿಯಲ್ಲಿ ದಿನಾಂಕ: 26.01.2024ರಂದು ನಡೆದ ರಾಷ್ಟ್ರ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಲಿದ್ದಾರೆ. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ 15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

### 3. ಕರ್ನಾಟಕ ಸರ್ಕಾರದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಆಯೋಜನೆ

2023-24ರಲ್ಲಿ ರಾಷ್ಟ್ರೀಯ ಭಾವೈಕ್ಯತಾ ಶಿಬಿರಗಳನ್ನು ಆಯೋಜಿಸಲು ಒಟ್ಟು 10 ವಿಶ್ವವಿದ್ಯಾಲಯ/ನಿರ್ದೇಶನಾಲಯಗಳಿಗೆ ಕರ್ನಾಟಕ ಸರ್ಕಾರವು 50.00ಲಕ್ಷ ರೂಗಳ ವಿಶೇಷ ಅನುದಾನವನ್ನು ಮಂಜೂರು ಮಾಡಿದೆ.

### 4. 31.10.2023ರಾಜ್ಯ ಮಟ್ಟದ "ರಾಷ್ಟ್ರೀಯ ಏಕ್ತಾ ದಿವಸ್" ಕಾರ್ಯಕ್ರಮ.

ದಿವಂಗತ ಸರ್ದಾರ್ ವಲ್ಲಭಾಯಿ ಪಟೇಲ್ ಇವರ ಜನ್ಮ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ "ರಾಷ್ಟ್ರೀಯ ಏಕ್ತ ದಿವಸ್" ಕಾರ್ಯಕ್ರಮವನ್ನು ದಿನಾಂಕ 31.10.2023ರಂದು ರಾಷ್ಟ್ರೀಯ ಸೇವಾ ಯೋಜನಾ ಕೋಶವು ರಾಜ್ಯ ಸರ್ಕಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಕಾರದೊಂದಿಗೆ ಆಚರಿಸಲಾಯಿತು.

### 5. ಸ್ವಾಮಿ ವಿವೇಕಾನಂದ ಜಯಂತಿ

ಸ್ವಾಮಿ ವಿವೇಕಾನಂದರ ಆದರ್ಶಗಳ ಬಗ್ಗೆ ಪ್ರಚಾರ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ನಡೆಸಲಾಯಿತು. ದಿನಾಂಕ: 12.01.2024ರಿಂದ 16.01.2024ರವರೆಗೆ ಒಂದು ವಾರದ ಕಾಲ ಯುವ ಸಪ್ತಾಹವನ್ನು ಆಚರಿಸಲಾಯಿತು.

**6. ಜೀವನಕೌಶಲ್ಯ ಶಿಕ್ಷಣ ಮತ್ತು ಆಪ್ತ ಸಲಹೆ**

ಜೀವನಕೌಶಲ್ಯ ಮತ್ತು ಆಪ್ತ ಸಲಹೆ ತರಬೇತಿಯನ್ನು ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಯಿತು. ಇದುವರೆಗೆ 136 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ 3826 ಕಾರ್ಯಕ್ರಮ ಅಧಿಕಾರಿಗಳಿಗೆ ತರಬೇತಿ ನೀಡಿದ್ದು, ಸದರಿ ಕಾರ್ಯಕ್ರಮ ಅಧಿಕಾರಿಗಳು 752642 ಎನ್.ಎಸ್.ಎಸ್ ಸ್ವಯಂ ಸೇವಕರಿಗೆ/ವಿದ್ಯಾರ್ಥಿಗಳಿಗೆ "ಆಪ್ತ ಸಲಹೆ ನೀಡಿದ್ದಾರೆ". ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2023-24ನೇ ಸಾಲಿನಲ್ಲಿ ರೂ.70.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**7. <u>ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್. ಅನುಷ್ಠಾನ</u>**

ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತಹ ರೀತಿಯಲ್ಲಿ ಹಲವಾರು ಎನ್. ಎಸ್. ಎಸ್. ಕಾರ್ಯಕ್ರಮ ಮತ್ತು ಚಟುವಟಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಹಲವಾರು ನೈತಿಕ ಮೌಲ್ಯ, ಶಿಸ್ತುಗಳ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಪ್ರೌಢಶಾಲೆಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಅನುಷ್ಠಾನಕ್ಕಾಗಿ ರೂ. 80.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**8. <u>ರಾಷ್ಟ್ರೀಯ ಸೇವಾ ಯೋಜನೆಯಡಿ ಯುವಜನೋತ್ಸವ</u>**

ರಾಜ್ಯ ಸರ್ಕಾರದ ಅನುದಾನದಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕೆ.ಎಲ್ ಇ. ವಿಶ್ವವಿದ್ಯಾಲಯ, ಬೆಳಗಾವಿ, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ ಮತ್ತು ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಗಳಲ್ಲಿ ಯುವಜನೋತ್ಸವಗಳನ್ನು ಆಚರಿಸಲು ತಲಾ ರೂ.4.00 ಲಕ್ಷಗಳಂತೆ ಒಟ್ಟು ರೂ.16.00 ಲಕ್ಷಗಳನ್ನು ಮೇಲಿನ ವಿಶ್ವವಿದ್ಯಾಲಯಗಳಿಗೆ ಬಿಡುಗಡೆ ಮಾಡಿದೆ.

**9. <u>ಡಾ.ಬಿ.ಆರ್.ಅಂಬೇಡ್ಕರ್‌ರವರ ಜನ್ಮ ದಿನಾಚರಣೆ</u>**

ಡಾ.ಅಂಬೇಡ್ಕರ್‌ರವರ ಜನ್ಮ ದಿನಾಚರಣೆ ಅಂಗವಾಗಿ ಸಂವಿಧಾನ ಓದು ದಿನಾಚರಣೆಯ ಅಂಗವಾಗಿ ಸ್ವಯಂ ಸೇವಕರಿಗೆ ಪ್ರತಿಜ್ಞೆ ಬೋಧಿಸುವುದು, ಸ್ವಯಂ ಸೇವಕರು ರಸಪ್ರಶ್ನೆ ಮತ್ತು ಪ್ರಬಂಧ ಸ್ಪರ್ಧೆ ಮತ್ತು ಸ್ವಯಂ ಸೇವಕರು ಅರಿವು, ಜಾಥಾ ಮತ್ತು ಇತರೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳುವಿಕೆಯ ಮೂಲಕ ಸಂವಿಧಾನ ದಿನವನ್ನು ಆಚರಿಸಲಾಯಿತು.

10. **ಬುಡಕಟ್ಟು ಜನಾಂಗದ ಪ್ರದೇಶಗಳಲ್ಲಿ (ಸಾಂಕ್ರಾಮಿಕವಲ್ಲದ ರೋಗಗಳು) Screening ಶಿಬಿರಗಳ ಆಯೋಜನೆ:**

ರಾಜ್ಯ ಎನ್‌ಎಸ್‌ಎಸ್ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಯೆನೆಪೋಯ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ದಕ್ಷಿಣ ಕನ್ನಡ, ಉಡುಪಿ, ಕೊಡುಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಬುಡಕಟ್ಟು ಜನಾಂಗದ ಪ್ರದೇಶಗಳಲ್ಲಿಒಟ್ಟು 83 Tribal NCD (ಸಾಂಕ್ರಾಮಿಕವಲ್ಲದ ರೋಗಗಳು) Screening ಶಿಬಿರಗಳನ್ನು ಆಯೋಜಿಸಿ, ಈ ಶಿಬಿರಗಳಿಂದ ಸುಮಾರು 7679 ಜನರು ಫಲಾನುಭವಿಗಳಾಗಿದ್ದಾರೆ

11. **ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ TABLEAU RALLY ಕಾರ್ಯಕ್ರಮ**ವನ್ನು ದಿನಾಂಕ:31.05.2023 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲಾಯಿತು. ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಶ್ರೀ ಬಿ. ನಾಗೇಂದ್ರರವರು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

12. **ವಿಶ್ವ ಮಾದಕ ವಸ್ತು ವಿರೋಧಿ ದಿನ**ದ ಅಂಗವಾಗಿ ದಿನಾಂಕ:26.06.2023ರಂದು ವಿಧಾನ ಸೌಧದ ಗ್ರ್ಯಾಂಡ್ ಸ್ಟೆಪ್ಸ್ ನಿಂದ ಕಂಠೀರವ ಕ್ರೀಡಾಂಗಣದವರೆಗೆ "ಬೃಹತ್ ಕಾಲ್ನಡಿಗೆ ಜಗೃತಿ ಜಾಥ ಕಾರ್ಯಕ್ರಮ"ವನ್ನು ಏರ್ಪಡಿಸಲಾಗಿದ್ದು, ಸದರಿ ಕಾರ್ಯಕ್ರಮವನ್ನು ಸನ್ಮಾನ್ಯ ಉಪಮುಖ್ಯಮಂತ್ರಿ ಗಳಾದ ಶ್ರೀ ಡಿ. ಕೆ. ಶಿವಕುಮಾರ್ ರವರು ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಮಾನ್ಯ ಸಚಿವರಾದ ಶ್ರೀ. ಬಿ. ನಾಗೇಂದ್ರರವರು ಚಾಲನೆ ನೀಡಿದರು. ಈ ಕಾರ್ಯಕ್ರಮದಲ್ಲಿ ಸುಮಾರು 10000ಕ್ಕೂ ಹೆಚ್ಚು ಎನ್. ಎಸ್. ಎಸ್. ಸ್ವಯಂ ಸೇವಕರು ಮತ್ತು ಸೇವಕಿಯರು ಈ ಜಾಗೃತಿ ಜಾಥಾದಲ್ಲಿ ಭಾಗವಹಿಸಿದ್ದರು.

13. ದಿನಾಂಕ:21.09.2023ರಂದು ರಾಜ್ಯ ಎನ್. ಎಸ್. ಎಸ್. ಕೋಶ ಮತ್ತು ಡಾ. ರಾಜ್ ಕುಮಾರ್ ಅಕಾಡೆಮಿಯ ನಡುವೆ ಆನ್ ಲೈನ್ "Learning App" ಮತ್ತು ಉಚಿತ ತರಬೇತಿಯನ್ನು ವಿಶ್ವವಿದ್ಯಾಲಯ/ನಿರ್ದೇಶನಾಲಯಗಳಲ್ಲಿ ಅನುಷ್ಠಾನಗೊಳಿಸುವುದು ಹಾಗೂ ಯುಪಿಎಸ್ಸಿ ಮತ್ತು ಕೆಪಿಎಸ್ಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಸಲುವಾಗಿ ಒಡಂಬಡಿಕೆ (MOU) ಮಾಡಿಕೊಳ್ಳಲಾಯಿತು.

14. **<u>ರಾಷ್ಟ್ರೀಯ ಸೇವಾ ಯೋಜನೆಯ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ</u>**:

ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳಲ್ಲಿ ಉತ್ತಮವಾಗಿ ಸೇವೆ ಸಲ್ಲಿಸಿದ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಇವರಿಗೆ ಅತ್ಯುತ್ತಮ ವಿಶ್ವವಿದ್ಯಾಲಯ ಪ್ರಶಸ್ತಿ, 12 ಕಾಲೇಜುಗಳಿಗೆ ಘಟಕ ಹಾಗೂ 12 ಕಾರ್ಯಕ್ರಮಾಧಿಕಾರಿಗಳಿಗೆ ಅತ್ಯುತ್ತಮ ಘಟಕ ಹಾಗೂ ಕಾರ್ಯಕ್ರಮಾಧಿಕಾರಿಗಳ ಪ್ರಶಸ್ತಿಯನ್ನು ಹಾಗೂ 12 ಸ್ವಯಂಸೇವಕ/ಸ್ವಯಂಸೇವಕಿಯರಿಗೆ ಅತ್ಯುತ್ತಮ ಸ್ವಯಂ ಸೇವಕ/ಸೇವಕಿಯರ ಪ್ರಶಸ್ತಿಗಳನ್ನು ದಿನಾಂಕ: ಅಕ್ಟೋಬರ್ 11, 2023ರಂದು ಬೆಂಗಳೂರಿನ ರಾಜಭವನದಲ್ಲಿ ನಡೆದ ಪ್ರಶಸ್ತಿ ಸಮಾರಂಭದಲ್ಲಿ ನೀಡಲಾಗಿದೆ.

ದಿನಾಂಕ:29.09.2023ರಂದು 2021-22ನೇ ಸಾಲಿನ ರಾಷ್ಟ್ರ ಮಟ್ಟದ ಎನ್.ಎಸ್.ಎಸ್. ಅತ್ಯುತ್ತಮ ಕಾರ್ಯಕ್ರಮಾಧಿಕಾರಿಗಳ ಪ್ರಶಸ್ತಿಗೆ ರಾಜ್ಯದಿಂದ ಡಾ. ರಾಘವೇಂದ್ರ ಆರ್. ರವರಿಗೆ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಗೌರವಾನ್ವಿತ ರಾಷ್ಟ್ರಪತಿ ಯವರಿಂದ ಪ್ರಶಸ್ತಿ ಪ್ರದಾನ ಮಾಡಲಾಯಿತು.